ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರದನ್ಯಾದಂ.ರವರ ನ್ಯಾಯಾಲಯ, ತರೀಕೆರೆ.

ಸಿ.ಸಿ.ನಂ.682/2016

ದಿನಾಂಕಃ18.05.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ: 12 ಸಿ.ಡಬ್ಲ್ಯೂ: 1

ಸಾಕ್ಷಿಯ ಹೆಸರು : ಶಿವಕುಮಾರ್
ತಂದೆಯ ಹೆಸರು : ಈಶ್ವರಪ್ಪ
ವಯಸ್ಸು : 47 ವರ್ಷ
ಉದ್ಯೋಗ : ವ್ಯವಸಾಯ
ವಾಸ : ಬೇಗೂರು.

**ಮುಖ್ಯ ವಿಚಾರಣೆಃ** ಮಾನ್ಯ ಸ ಸ ಅ ಅವರಿಂದಃ-

ಚಾಸಾ 7 ನನ್ನ ಅಜ್ಜ. ಚಾಸಾ 8 ನನ್ನ ದೊಡ್ಡಪ್ಪ. ಚಾಸಾ 9 ನನ್ನ ತಂದೆ. ಚಾಸಾ 10 ನನ್ನ ದೊಡ್ಡಮ್ಮ. ಆರೋಪಿತರು ನನಗೆ ರಕ್ತ ಸಂಬಂಧಿಗಳು.

1 ರಿಂದ 3 ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

1 ಮತ್ತು 2ನೇ ಆರೋಪಿತರು ಈ ದಿನ ಗೈರುಹಾಜರಾಗಿದ್ದು, ಅವರ ಗುರುತಿಸುವಿಕೆಯ ಬಗ್ಗೆ ತಮ್ಮ ತಕರಾರು ಇರುವುದಿಲ್ಲ ಎಂದು ಅವರ ಪರವಾಗಿನ ವಕೀಲರು ತಿಳಿಸಿರುತ್ತಾರೆ. ಸಾಕ್ಷಿ ಮುಂದುವರೆದು 3ನೇ ಆರೋಪಿ ಈಗ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ತಂದೆಯ ತಂದೆಯ ಹೆಸರು ದೊಡ್ಡಯ್ಯ. ಅವರ ತಂಗಿಯ ಹೆಸರು ಕಾಳಮ್ಮ. ಸದರಿ ಕಾಳಮ್ಮನವರಿಗೆ ಬೇಗೂರಿನಲ್ಲಿ ಹಳೇಯ ಸರ್ವೇ ನಂಬರ್ 111/1 ರಲ್ಲಿ 3 ಎಕರೆ ಗುಂಟೆ ಇತ್ತು. ಈಗ ಸದರಿ ಜಮೀನಿನ ಹೊಸ ಸರ್ವೇ ನಂಬರ್ 32/1 ಆಗಿದೆ. ಸದರಿ ಕಾಳಮ್ಮನವರು ಸುಮಾರು 1948 ರಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರ ಮರಣದ ನಂತರ ಅವರ ಮೈದುನನಾದ ಬಸಪ್ಪನಿಗೆ 1 ಎಕರೆ 20 ಗುಂಟೆ ಸದರಿ ಜಮೀನಿನಲ್ಲಿ ಬಂದಿರುತ್ತದೆ. ಸದರಿ ಬಸಪ್ಪ ಈಗ ತೀರಿಕೊಂಡಿರುತ್ತಾರೆ.ಸದರಿ ಬಸಪ್ಪ ಸದರಿ ಜಮೀನನ್ನು ವೀರಪ್ಪ, ರುದ್ರಪ್ಪ ಮತ್ತು ಚನ್ನವೀರಪ್ಪ ರವರಿಗೆ ದಾನ ಮಾಡಿರುತ್ತಾರೆ. ಸುಮಾರು 40-50 ವರ್ಷಗಳ ಹಿಂದೆ

ದಾನ ಮಾಡಿರುತ್ತಾರೆ. ಸದರಿ ದಾನ ಮಾಡಿದ ಜಮೀನಿನಲ್ಲಿ ಸದರಿ 3 ಜನ ಸ್ವಾಧೀನದಲ್ಲಿ ಇರುತ್ತಾರೆ. ನನ್ನ ತಂದೆ ಒಟ್ಟು 5 ಜನ ಅಣ್ಣತಮ್ಮಂದಿರು. ಅವರುಗಳೆಂದರೇ ಸಿದ್ದರಾಮಪ್ಪ , ಕಾಡಳಪ್ಪ , ರೇವಣಸಿದ್ದಪ್ಪ, ಪಂಚಕ್ಷಾರಪ್ಪ ಹಾಗೂ ನನ್ನ ತಂದೆ ಈಶ್ವರಪ್ಪ. ಸದರಿ ಸರ್ವೇ ನಂಬರ್ ನಲ್ಲಿ ಉಳಿದ ಜಮೀನಿನಲ್ಲಿ ನನ್ನ ತಂದೆಯ ಅಣ್ಣತಮ್ಮಂದಿರು ಸ್ವಾಧೀನದಲ್ಲಿ ಇರುತ್ತಾರೆ. 1 ನೇ ಆರೋಪಿಯು ಸದರಿ ಕಾಳಮ್ಮನ ಸದರಿ ಸರ್ವೇ ನಂಬರ್ ನ ಸಂಪೂರ್ಣ ಜಮೀನನ್ನು ಅವರ ಹೆಸರಿಗೆ 2012 ರಲ್ಲಿ ಕ್ರಯಕ್ಕೆ ಮಾಡಿಸಿಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ಸದರಿ ಕಾಳಮ್ಮ ನವರು ಜೀವಂತ ಇರಲಿಲ್ಲ. ಆನಂತರ 1 ನೇ ಆರೋಪಿಯು ಖಾತೆ ಮಾಡಿಸಿಕೊಳ್ಳಲು ಗ್ರಾಮಲೆಕ್ಕಾಧಿಕಾರಿಯ ಬಳಿ ಬಂದಾಗ ನಾವು ಕಾಳಮ್ಮ ನವರು ತೀರಿಕೊಂಡು ಹೋಗಿರುತ್ತಾರೆ ಎಂದು ಸದರಿ ಅಧಿಕಾರಿಗಳಿಗೆ ತಿಳಿಸಿರುತ್ತೇವೆ. ಆನಂತರ ತಹಸೀಲ್ದಾರ್ ರವರ ಬಳಿ ಖಾತೆಯಾಗದಂತೆ ತಡೆ ಹಾಕಿರುತ್ತೇವೆ. ಆನಂತರ ತಹಸೀಲ್ದಾರ್ ರವರು ಯಥಾ ಸ್ಥಿತಿಯನ್ನು ಕಾಪಾಡುವಂತೆ ಆದೇಶ ಮಾಡಿರುತ್ತಾರೆ. 2 ಮತ್ತು 3 ನೇ ಆರೋಪಿತರು ಸದರಿ ಕ್ರಯ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. 2 ನೇ ಆರೋಪಿಯು 1 ನೇ ಆರೋಪಿಯ ಮಗ. ಸದರಿ ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಳ್ಳುವಾಗ ಸದರಿ ಕಾಳಮ್ಮ ಮರಣ ಹೊಂದಿದ್ದ ಬಗ್ಗೆ 1 ಮತ್ತು 2 ನೇ ಆರೋಪಿತರಿಗೆ ತಿಳಿದಿತ್ತು. ಆರೋಪಿತರು ನಮಗೆ ಆ ರೀತಿ ಮಾಡಿದ ಕಾರಣ ನಮಗೆ ತೊಂದರೆ ಆಗಿರುತ್ತದೆ. ನಂತರ ನಾವು ಈ ನ್ಯಾಯಾಲಯದ ಮುಂದೆ ಖಾಸಗಿ ದೂರನ್ನು ಸಲ್ಲಿಸಿರುತ್ತೇವೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಖಾಸಗಿ ದೂರು ಆಗಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-4(ಎ) ರಿಂದ ನಿಪಿ-4(ಎಫ್) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿಯು

ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಪಂಚನಾಮೆ ಆಗಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಆರ್ ಐ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಸಹ ಬಂದಿದ್ದರು. ಆ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ.

ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ನಿಪಿ6 ಮತ್ತು 7 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ 12.12.1947 ರ ದಾನಪತ್ರದ ದೃಢೀಕೃತ ನಕಲು ಆಗಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು 2016-17 ನೇ ಸಾಲಿನ ಸರ್ವೇ ನಂಬರ್ 32/1 ರ ಪಹಣಿ ಪತ್ರಿಕೆ ಆಗಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಎರಡು ದಾಖಲೆಗಳನ್ನು ತೋರಿಸಿದ್ದು, ಸದರಿ ದಾಖಲೆಗಳು ಸದರಿ ಜಮೀನಿಗೆ ಸಂಬಂಧಪಟ್ಟ ನಮೂನೆ 5 ಮತ್ತು 6 ಆಗಿದ್ದು ಅದನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ11.09.2014 ರ ತಹಸೀಲ್ದಾರ್ ರವರ ಆದೇಶದ ದೃಢೀಕೃತ ನಕಲು ಆಗಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಎರಡು ದಾಖಲೆಗಳನ್ನು ತೋರಿಸಿದ್ದು, ಸದರಿ ದಾಖಲೆಯು

ಕಾಳಮ್ಮ ಮೃತಪಟ್ಟ ಬಗ್ಗೆ ಹಾಗೂ ನಾವು ಸ್ವಾಧೀನದಲ್ಲಿ ಇರುವ ಬಗ್ಗೆ ಸ್ಥಳ ತನಿಖಾ ಪಂಚನಾಮೆ ಮತ್ತು ವರದಿ ಆಗಿದ್ದು ಅದನ್ನು ನಿಪಿ-13 ಮತ್ತು 14 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಕಾಳಮ್ಮ ನವರ ಮರಣ ಪ್ರಮಾಣಪತ್ರದ ದೃಢೀಕೃತ ನಕಲು ಆಗಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಎರಡು ದಾಖಲೆಗಳನ್ನು ತೋರಿಸಿದ್ದು, ಸದರಿ ದಾಖಲೆಯು ನಮ್ಮ ವಂಶವೃಕ್ಷದ ದೃಢೀಕೃತ ನಕಲುಗಳು ಆಗಿದ್ದು ಅವುಗಳನ್ನು ನಿಪಿ-16 ಮತ್ತು17 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಆರೋಪಿತರ ಕ್ರಯ ಪತ್ರದ ದೃಢೀಕೃತ ನಕಲು ಆಗಿದ್ದು ಅದನ್ನು ನಿಪಿ-18 ಎಂದು ಗುರುತಿಸಲಾಯಿತು.

ಆರೋಪಿತರು ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ.

**ಪಾಟೀಸವಾಲುಃ** ಆರೋಪಿತರ ಪರ ಶ್ರೀ ಟಿ ಎನ್ ಎಂ ವಕೀಲರಿಂದಃ-

ಶ್ರೀರಾಂಪುರದ 3 ಎಕರೆ 1 ಗುಂಟೆ ಜಮೀನು ಕಾಳಮ್ಮನ ಹೆಸರಿನಲ್ಲಿ ಖಾತೆ ಇದೆ. ನನಗೆ ದಾನ ಪತ್ರವನ್ನು ಮಾಡಿದ ದಿನಾಂಕ ನೆನಪಿಲ್ಲ. ಸದರಿ ಪತ್ರವನ್ನು ಮಾಡಿ ಸುಮಾರು 50-60 ವರ್ಷ ಆಗಿರಬಹುದು. ಸದರಿ ದಾನ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ದಾನ ಪತ್ರದಂತೆ ಇವರೆಗೂ ಏಕೆ ಖಾತೆ ಆಗಿರುವುದಿಲ್ಲ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ದಾನಪತ್ರದಂತೆ ಖಾತೆಯನ್ನು ಬದಲಾಯಿಸಿಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರಲ್ಲಿನ ಕೆಲವು ಆಸ್ತಿಗಳ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದು ಈ ಜಮೀನಿನ ಖಾತೆ ಮಾತ್ರ ಬದಲಾವಣೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ್

40, 117, 41ರ ಜಮೀನುಗಳ ಖಾತೆಗಳು ಸದರಿ ದಾನಪತ್ರದಂತೆ ಬದಲಾವಣೆ ಆಗಿರುತ್ತವೆ. ನಾನು ಹಾಜರು ಮಾಡಿರುವ ದಾನಪತ್ರದ ಮೂಲಪ್ರತಿ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಆದರೆ ನಾನು ಎಸ್ ಆರ್ ನಂಬರ್ ಇದ್ದ ಕಾರಣ ತಾಲ್ಲೂಕು ಕಚೇರಿಯಲ್ಲಿ ದೃಢೀಕೃತ ನಕಲನ್ನು ಪಡೆದಿರುತ್ತೇನೆ. ನಿಪಿ18ರ ಕ್ರಯಪತ್ರದಲ್ಲಿ ನಮೂದು ಮಾಡಿದ ವಿಸ್ತೀರ್ಣದಲ್ಲಿ 1 ಮತ್ತು 2ನೇ ಆರೋಪಿತರು ಈಗಲೂ ಸಹ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು 20 ಗುಂಟೆಯಲ್ಲಿ ಮಾತ್ರ ಇರುತ್ತಾರೆ ಎಂದು ನುಡಿಯುತ್ತಾರೆ. ನಿಪಿ18ರ ಕ್ರಯಪತ್ರವು ನೋಂದಣಿ ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿ. ನಿಪಿ18 ಕ್ಕೆ ಯಾರು ಯಾರು ಖುದ್ದಾಗಿ ಸಹಿ ಹಾಕಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಮತ್ತು ನಾನು ಆಸಮಯದಲ್ಲಿ ಹಾಜರಿರಲಿಲ್ಲ ಎಂದರೆ ಸರಿ. ನಿಪಿ18 ರಲ್ಲಿ ತೋರಿಸಿದ ಕಾಳಮ್ಮ ರವರನ್ನು ನಾನು ಆರೋಪಿಯಾಗಿ ಸೇರಿಸಿರುತ್ತೇನೆಯೇ ಎಂದರೆ ನನಗೆ ಅವರು ಯಾರು ಎಂದು ಗೊತ್ತಿಲ್ಲದ ಕಾರಣ ಸೇರಿಸಿಲ್ಲ. ಪೊಲೀಸರು ನಾನು ದೂರನ್ನು ನೀಡಿದ 3 ವರ್ಷಗಳ ನಂತರ ಸದರಿ ಜಮೀನಿಗೆ ಸ್ಥಳ ಪಂಚನಾಮೆಗೆ ಬಂದಿರುತ್ತಾರೆ. ನನಗೆ ದಿನಾಂಕ ನೆನಪಿಲ್ಲ. ಆ ಸಮಯದಲ್ಲಿ ಚಂದ್ರಪ್ಪ ಎಂಬ ಆರ್ ಐ ಬಂದಿದ್ದರು. ಆ ದಿನ ಸದರಿ ಸರ್ವೇ ನಂಬರ್ 32/ 1 ರಲ್ಲಿ ಸ್ವಾಧೀನದಲ್ಲಿ ಇದ್ದ ಬಸವರಾಜಪ್ಪ, ವೀರಪ್ಪ ಮತ್ತು ನಾನು ಹಾಗೂ ಲೋಕೇಶಪ್ಪ ಮತ್ತು ಜಯಪ್ಪ ಹಾಗೂ ರತ್ನಮ್ಮ ಎನ್ನುವವರು ಇದ್ದರು. ಆ ಸಮಯದಲ್ಲಿ ಪೊಲೀಸರು ಬಸವರಾಜಪ್ಪ, ರತ್ನಮ್ಮ ಮತ್ತು ಲೋಕೇಶಪ್ಪ ಹಾಗೂ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ಪಂಚನಾಮೆ 2-3 ಪುಟಗಳು ಇರುತ್ತದೆ. ನಾವು ಸ್ಥಳದಲ್ಲಿ ಸಹಿಯನ್ನು ಮಾಡಿರುತ್ತೇವೆ. ಸಾಕ್ಷಿ ಮೋಹನ್ ಮತ್ತು ಜೀವನ್ ಎನ್ನುವವರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ಮಹಜರ್ ಅನ್ನು ಬರೆದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ಪೂರ್ವಕ್ಕೆ ಸಿದ್ದರಾಮಪ್ಪ ನ ಜಮೀನು, ಪಶ್ಚಿಮಕ್ಕೆ ತ್ಯಾಗದಕಟ್ಟೆ ಸಿದ್ದರಾಮಪ್ಪನ ಜಮೀನು, ದಕ್ಷಿಣಕ್ಕೆ ಸರೋಜಮ್ಮ ರವರ ಜಮೀನು ಹಾಗೂ ಉತ್ತರಕ್ಕೆ ರಸ್ತೆ ಇರುತ್ತದೆ. ಮತ್ತು ಅದೇ ರೀತಿ ಚಕ್ಕುಬಂದಿಯನ್ನು ಪಂಚನಾಮೆಯಲ್ಲಿ ನಮೂದಿಸಿದ ಬಗ್ಗೆ ಗೊತ್ತಿಲ್ಲ. ನಾನು ಸದರಿ ಪಂಚನಾಮೆಯನ್ನು

ಓದಿ ತಿಳಿದುಕೊಳ್ಳಲಿಲ್ಲ ಮತ್ತು ಬರೆದ ಮಹಜರ್ ಗೆ ಸಹಿಯನ್ನು ಹಾಕಿರುತ್ತೇನೆ.

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಾಶ ಕೋರಿದ್ದು, ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲು ಮಾಡಲು ಕಾಲವಕಾಶವನ್ನು ನೀಡಿ ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

Sd/-

(ಸಂತೋಷ್ ಕುಮಾರ್ ಪಿ.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಹೆ.ಪ್ರ.ದ.ನ್ಯಾ.ದಂಡಾಧಿಕಾರಿ, ತರೀಕೆರೆ.